Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 12/2025

ಪ್ರಾ.ಸಾ. 9 ಚಾ.ಸಾ 16

| | | |
|---|---|---|
| ಹೆಸರು | : | ಶರಣಪ್ಪ |
| ತಂದೆಯ ಹೆಸರು | : | ನರಸಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಲಾರಿಯ ಚಾಲಕ |
| ವಾಸ | : | ಕಾಕಲವಾರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 27-03-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-1 ಇವರು ನನ್ನ ತಮ್ಮನ ಹೆಂಡತಿ ಆಗಿರುತ್ತಾರೆ. ಮೃತ ನರೇಂದ್ರ ಇವರು ಚಾಸಾ-1 ರವರ ಮಗನಾಗಿರುತ್ತಾನೆ. ಚಾಸಾ-17 ಇವರು ನನ್ನ ಹೆಂಡತಿ ಆಗಿರುತ್ತಾರೆ. ಚಾಸಾ-21, 23, 28 ರವರ ಪರಿಚಯ ಇರುತ್ತದೆ. ಆರೋಪಿತನ ಪರಿಚಯ ಇರುತ್ತದೆ. ನಾವು ಮೂರು ಜನ ಅಣ್ಣ ತಮ್ಮಂದಿರು ಇರುತ್ತೇವೆ. ಅವರುಗಳು ಎಂದರೆ ಬಸಪ್ಪ, ಮಹಾಲಿಂಗಪ್ಪ ಮತ್ತು ನಾನು ಈಗೆ ಮೂರು ಜನ ಸಹೋದರರು ಇರುತ್ತೇವೆ. ಮಹಾಲಿಂಗಪ್ಪ(ಚಾಸಾ-1 ರವರ ಗಂಡ) ಇವರು 2017 ರಲ್ಲಿ ಮೃತಪಟ್ಟಿರುತ್ತಾರೆ. ಬಸಪ್ಪ ಇವರು 2004 ರಲ್ಲಿ ಮೃತಪಟ್ಟಿರುತ್ತಾನೆ. ನಾನು, ನನ್ನ ಹೆಂಡತಿ ಚಾಸಾ-17 ಮತ್ತು ಚಾಸಾ-1 ಹಾಗೂ ಅವರ ಮಗ ಮೃತ ನರೇಂದ್ರ ನಾವು ಎಲ್ಲರೂ ಒಂದೇ ಮನೆಯಲ್ಲಿ ಇರುತ್ತಿದ್ದೇವು. ಮೃತ ನರೇಂದ್ರ ಇವರು 5 ನೇ ತರಗತಿಯಲ್ಲಿ ಬ್ರೈಟ್ ಫ್ಯೂಚರ್ ಎಂಬ ಶಾಲೆಯಲ್ಲಿ ಓದುತ್ತಿದ್ದನು. ನರೇಂದ್ರನ ಎಲ್ಲ ಶಾಲೆ ಖರ್ಚುಗಳನ್ನು ನಾನು ಹಾಗೂ ಚಾಸಾ-1 ರವರು ನೋಡುತ್ತಿದ್ದರು.

2. ದಿಃ 30.09.2024 ರಂದು ನಾನು ಮುಂಜಾನೆ ನಾರಾಯಣಪೇಟೆಗೆ ಹೋಗಿದ್ದೇನು. ರಾತ್ರಿ 8.00 ಗಂಟೆ ಸುಮಾರು ಚಾಸಾ-1 ಇವರು ಪೋನ ಮಾಡಿ ಬಾಲಕ ನರೇಂದ್ರ ಇವರು ಕಾಣುತ್ತಿಲ್ಲ ಎಂದು ತಿಳಿಸಿರುತ್ತಾರೆ. ನಾನು ಮತ್ತು ಚಾಸಾ-20 ರವರಿಗೆ ಪೋನ ಮಾಡಿ ಜುಮ್ಮಾ ಮಸೀದಿಯ ಮೈಕನಲ್ಲಿ ಅನೌನ ಮಾಡಿಸುವಂತೆ ಹೇಳಿರುತ್ತೇನೆ. ಅದೇ ರಾತ್ರಿ 9.30 ಗಂಟೆಗೆ ಮರಳಿ ನಾನು ಕಾಕಲವಾರ ಗ್ರಾಮಕ್ಕೆ ಬಂದಿರುತ್ತೇನೆ. ಚಾಸಾ-20 ರವರು ಪೋನ ಮಾಡಿ ನರೇಂದ್ರನ ನಮ್ಮ ಊರಿನ ಸದಾಶಿವರೆಡ್ಡಿಯವರ ಮನೆಯ ಎತ್ತು ಕಟ್ಟುವ ಕೋಠಡಿಯಲ್ಲಿ ಆತನ ಮೃತ ದೇಹ ಕಂಡು ಬಂದಿರುತ್ತದೆ ಎಂದು ಹೇಳಿದನು. ಅಲ್ಲಿಗೆ ನಾನು, ನನ್ನ ಹೆಂಡತಿ ಹಾಗೂ ಚಾಸಾ-1 ರವರು ಮತ್ತು ನಮ್ಮ ಕುಟುಂಬಸ್ಥರು ಎಲ್ಲರು ಘಟನಾ ಸ್ಥಳಕ್ಕೆ ಹೋಗಿ ನೋಡಿರುತ್ತೇವೆ. ಅಲ್ಲಿ ನರೇಂದ್ರ ಮೃತಪಟ್ಟಿರುತ್ತಾನೆ ಎಂದು ಗೊತ್ತಾಯಿತು. ಆತನ ಸಾವಿನಲ್ಲಿ ಸಂಶಯವಿರುತ್ತದೆ ಎಂದು ಚಾಸಾ-1 ರವರು ದೂರು ಸಲ್ಲಿಸಿರುತ್ತಾರೆ.

3. ದಿಃ 30.09.2024 ರಂದು ಸಾಯಂಕಾಲ 7.30 ಗಂಟೆಗೆ ಚಾಸಾ-21 ರವರು ಮೃತ ನರೇಂದ್ರ ಹಾಗೂ ಆರೋಪಿ ಅಬ್ದುಲ್ ನಬೀ ಚಾಸಾ-28 ರವರ ಅಂಗಡಿಯ ಹತ್ತಿರ ಇದ್ದುದನ್ನು ನಾನು ನೋಡಿರುತ್ತೇನೆ ಎಂದು ಹೇಳಿದನು. ಚಾಸಾ-21 ರವರು ಆ ಅಂಗಡಿಗೆ ತಂಬಸಪ ತೆಗೆದುಕೊಳ್ಳಲು ಹೋಗಿರುತ್ತಾರೆ. ಅಂಗಡಿಯಲ್ಲಿ ತಂಬಸಪ್ ಇಲ್ಲದ ಕಾರಣ ವಾಪಸ್ಸು ಬಂದಿರುತ್ತೇನೆ ಎಂದು ತಿಳಿಸಿರುತ್ತಾನೆ. ಆ ಸಮಯದಲ್ಲಿ ಆರೋಪಿತನು ರೂ.20/- ಕೊಟ್ಟು ಒಂದು ನೀರಿನ ಬಾಟಲನ್ನು ಖರೀದಿಸಿದನು, ನರೇಂದ್ರನಿಗೆ ರೂ.5/- ಕೊಟ್ಟು ಒಂದು ಚಾಕಲೇಟ್ ತೆಗೆದಿಕೋ ಎಂದು ಹೇಳಿ ಹೋದನು ಎಂದು ಹೇಳಿದನು. ಚಾಸಾ-21 ಇವರು ಆರೋಪಿಯು ಮೃತ ನರೇಂದ್ರನನ್ನು ಚಾಸಾ-27 ಸದಾಶಿವರೆಡ್ಡಿ ರವರ ದನದ ಕೊಟ್ಟಿಗೆಗೆ ಕರೆದುಕೊಂಡು ಹೋಗುವುದನ್ನು ನೋಡಿದೆ ಎಂದು ತಿಳಿಸಿದನು. ಈ ವಿಷಯವನ್ನು ಚಾಸಾ-1 ರವರೊಂದಿಗೆ ಚರ್ಚಿಸಿದಾಗ ಚಾಸಾ-

ರವರು ಆರೋಪಿತನೊಂದಿಗೆ ಅನೈತಿಕ ಸಂಬಂಧ ಹೊಂದಿರುವುದಾಗಿ ಆರೋಪಿತನು ಚಾಸಾ-1 ರವರನ್ನು ಹೈದ್ರಾಬಾದಿಗೆ ಹೋಗಿ ಜೀವನ ಮಾಡೋಣ ಎಂದು ಹೇಳಿರುತ್ತಾನೆ ಅದಕ್ಕೆ ಚಾಸಾ-1 ಇವರು ನನ್ನ ಮಗ ಚಿಕ್ಕವನು ಇರುತ್ತಾನೆ ಅವನ ಭವಿಷ್ಯದ ಸಲುವಾಗಿ ನಾನು ಇರಬೇಕಾಗುತ್ತದೆ ಎಂದು ಹೇಳಿರುತ್ತಾಳೆ. ಮೃತ ನರೇಂದ್ರ ನಮ್ಮ ಅನೈತಿಕ ಸಂಬಂಧಕ್ಕೆ ಅಡ್ಡಿ ಆಗುತ್ತಾನೆ ಎಂದು ತಿಳಿದು ಮೃತ ನರೇಂದ್ರನ ಮೂಗು, ಬಾಯಿ ಗಟ್ಟಿಯಾಗಿ ಹಿಡಿದು ಉಸಿರುಗಟ್ಟಿಸಿ ಕೊಲೆ ಮಾಡಿರುತ್ತಾನೆ ಎಂದು ಗೊತ್ತಾಯಿತು.

4. ಆ ದಿನ ಘಟನಾ ಸ್ಥಳದ ಹತ್ತಿರ ಆರೋಪಿಯು ಮೃತನೊಂದಿಗೆ ಇದ್ದ ಬಗ್ಗೆ ಚಾಸಾ-28 ರವರ ಅಂಗಡಿಗೆ ಕುಡಿಸಿದ ಸಿ.ಸಿ.ಟಿವಿ ಕ್ಯಾಮರದಲ್ಲಿ ಕಂಡು ಬರುತ್ತದೆ. ಸಾಕ್ಷಿದಾರರಿಗೆ ಈಗ ಮೃತ ನರೇಂದ್ರ ಚಪ್ಪಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ಘಟನಾ ಸ್ಥಳದಲ್ಲಿ ಇದ್ದಂತಹ ಚಾಕಲೇಟ ಕವರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿದೆ. ಮೃತ ನರೇಂದ್ರನ ತುಂಬ ತೋಳಿನ ಅಂಗಿ ಮತ್ತು ಪ್ಯಾಂಟನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.3 ಮತ್ತು 4 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

5. ನಾವು ಮೂರ ಜನ ಅಣ್ಣ ತಮ್ಮಂದಿರು ಅವರುಗಳೆಂದರೆ ನಾನು, ಬಸಪ್ಪ ಮತ್ತು ಮಹಾಲಿಂಗಪ್ಪ ಈಗೆ ಇದ್ದು ನನಗೆ ಮಕ್ಕಳಾಗಿರುವುದಿಲ್ಲ. ಮಹಾಲಿಂಗಪ್ಪನ ಮಗ ಮೃತ ನರೇಂದ್ರ. ಬಸಪ್ಪನಿಗೆ ಮಕ್ಕಳ ಆಗಿರುವುದಿಲ್ಲ. ಮೃತ ನರೇಂದ್ರ ಒಬ್ಬನೆ ನಮ್ಮ ವಂಶೋದ್ಧಾರಕನಾಗಿರುತ್ತಾನೆ. ಚಾಸಾ-1 ಮತ್ತು ನಾನು ಒಂದೇ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

6. ದಿಃ 30.09.2024 ರಂದು ನಾನು ನಾರಾಯಣಪೇಟೆಗೆ ವೈಯಕ್ತಿಕ ಕೆಲಸಕ್ಕೆ ಹೋಗಿದ್ದೇನು ಆದರೆ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಪೊಲೀಸರ ಮುಂದೆ ನಾನು ಒಟ್ಟು ಮೂರು ಸಾರಿ ಹೇಳಿಕೆ ನೀಡಿದ್ದೇನೆ. ಮೃತ ನರೇಂದ್ರ ಎಲ್ಲಿ ಬೇಕು ಅಲ್ಲಿ ಮಲಗಿಕೊಳ್ಳುತ್ತಿದಿಲ್ಲ. ದಿಃ 30.09.2024 ರಂದು ರಾತ್ರಿ 9.30 ಗಂಟೆಗೆ ನಾನು ನನ್ನ ಹೆಂಡತಿಯನ್ನು ಮಾತಾನಾಡಿಸಿರುತ್ತೇನೆ. ಮೃತ ಬಾಲಕ ನರೇಂದ್ರನ ಅತ್ತೆ ಅಂದರೆ ದೇವಿಂದ್ರಮ್ಮ ಮತ್ತು ವೆಂಕಟಮ್ಮ ಎಂದು ಇರುತ್ತಾರೆ. ವೆಂಕಟಮ್ಮ ಮತ್ತು ದೇವಿಂದ್ರಮ್ಮ ಇವರು ಮನೆ ಸುಮಾರು ಅರ್ಧ ಕಿಲೋ ಮೀಟರ ದೂರ ಇರುತ್ತದೆ. ನರೇಂದ್ರನ ಶವಸಂಸ್ಕಾರ ಮಾಡಿದ ಮೇಲೆ ಚಾಸಾ-20 ಮತ್ತು 21 ಇವರು ಒಂದು ಒಂದು ಸಲ ಭೇಟಿ ಆಗಿರುತ್ತೇನೆ. ಶವಸಂಸ್ಕಾರ ಮಾಡಿದ 3-4 ದಿನಕ್ಕೆ ಚಾಸಾ-20 ಮತ್ತು 21 ರವರನ್ನು ಭೇಟಿ ಆಗಿರುತ್ತೇನೆ. ಚಾಸಾ-1 ರವರಿಗೆ ಆರೋಪಿಗೆ ಅನೈತಿಕ ಸಂಬಂಧ ಇದ್ದ ಬಗ್ಗೆ ನಾನು ಪೊಲೀಸರಿಗೆ ಕೊಟ್ಟಂತಹ ದಿಃ 01.10.2024 ಮತ್ತು 02.10.2024 ರಂದು ಕೊಟ್ಟಂತಹ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಹಾಗೂ ಆರೋಪಿತನ ನಡುವೆ ಅನೈತಿಕ ಸಂಬಂಧ ಇದ್ದ ಬಗ್ಗೆ ಮೊದಲು ನನಗೆ ಗೊತ್ತಿರಲಿಲ್ಲ.

7. ನರೇಂದ್ರನ ಶವಸಂಸ್ಕಾರವರನ್ನು ದಿಃ 01.10.2024 ರಂದು ಮಾಡಿರುತ್ತೇವೆ. ಆ ಕಾಲಕ್ಕೆ ಚಾಸಾ-20 ಮತ್ತು 21 ರವರು ಬಂದಿದ್ದರು. ಆ ಸಮಯದಲ್ಲಿ ನಾನು ಚಾಸಾ-20 ಮತ್ತು 21 ರವರೊಂದಿಗೆ ಮಾತಾನಾಡಿರುವುದಿಲ್ಲ. ಅವರು ಸಹ ನನ್ನನ್ನು ಮಾತಾನಾಡಿಸಿರುವುದಿಲ್ಲ. ಮಗುವಿನ ಮಣ್ಣು ಮಾಡುವ ಕಾಲಕ್ಕೆ ಬೇರೆ ಯಾರು ನನ್ನನ್ನು ಮಾತಾನಾಡಿಸಿರುವುದಿಲ್ಲ. ನಾನು, ನನ್ನ ಹೆಂಡತಿ, ಚಾಸಾ-1 ಹಾಗೂ ಮೃತ ನರೇಂದ್ರ ಒಂದೇ ಮನೆಯಲ್ಲಿ ಇರುತ್ತಿದ್ದೇವು ಎಂದು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಇದೇ ಪ್ರಥಮ ಬಾರಿಗೆ

ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನರೇಂದ್ರನ ಶಾಲೆಯ ಖರ್ಚನ್ನು ನಾನು ಮತ್ತು ಚಾಸಾ-1 ರವರು ನೋಡಿಕೊಳ್ಳುತ್ತಿದ್ದೇವು ಎಂದು ನಾನು ಪೊಲೀಸರ ಮುಂದೆ ಕೊಟ್ಟಂತಹ 4 ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

8. ದಿಃ 30.09.2024 ರಂದು ನಾರಾಯಣಪೇಟೆಗೆ ಹೋಗಿದ್ದೆ ರಾತ್ರಿ 9.30 ಗಂಟೆಗೆ ಕಾಕಲವಾರಕ್ಕೆ ಬಂದಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-20 ಇವರು ನರೇಂದ್ರನ ಮೃತ ದೇಹ ಚಾಸಾ-27 ಸದಾಶಿವರೆಡ್ಡಿ ರವರು ದನದ ಕೊಟ್ಟಿಗೆಯಲ್ಲಿ ಇರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 30.09.2024 ರಂದು ಸಾಯಂಕಾಲ 7.30 ಗಂಟೆಗೆ ಚಾಸಾ-21 ರವರು ಮೃತ ನರೇಂದ್ರ ಹಾಗೂ ಆರೋಪಿ ಅಬ್ದುಲ್ ನಬೀ ಚಾಸಾ-28 ರವರ ಅಂಗಡಿಯ ಹತ್ತಿರ ಇದ್ದುದನ್ನು ನಾನು ನೋಡಿರುತ್ತೇನೆ ಎಂದು ಹೇಳಿದನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ಇದೆ ಪ್ರಥಮ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಪೊಲೀಸರ ಮುಂದೆ ಕೊಟ್ಟಂತಹ 4 ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-21 ಇವರು ತಂಸಪ್ ತರಲು ಚಾಸಾ-28 ರವರ ಅಂಗಡಿಗೆ ತಂಸಪ ತರಲು ಹೋಗಿದ್ದ ಆದರೆ ಇಲ್ಲದ ಕಾರಣ ನೀರಿನ ಬಾಟಲ ತೆಗೆದುಕೊಂಡು ಬಂದಿರುತ್ತಾನೆ ಎಂದು ನನಗೆ ಹೇಳಿದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಮತ್ತು ನಾನು ಕೊಟ್ಟಂತಹ 4 ಹೇಳಿಕೆಗಳಲ್ಲಿ ನಾನು ಈ ರೀತಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ರೂ.20/- ಕೊಟ್ಟು ನೀರಿನ ಬಾಟಲನ್ನು ಖರೀದಿಸಿರುತ್ತಾನೆ ಮೃತ ನರೇಂದ್ರನಿಗೆ ರೂ.5/- ಕೊಟ್ಟು ಚಾಕಲೇಟ ಖರೀದಿಸು ಎಂದು ಹೇಳಿರುತ್ತಾನೆ ಎಂದು ಇದೆ ಪ್ರಥಮ ಬಾರಿಗೆ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಕೊಟ್ಟಂತಹ 4 ಹೇಳಿಕೆಯಲ್ಲಿ ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

9. ಚಾಸಾ-21 ಯಲ್ಲಪ್ಪ ಇವರು ಆರೋಪಿ ಮೃತ ನರೇಂದ್ರನನ್ನು ಚಾಸಾ-28 ಸದಾಶಿವರೆಡ್ಡಿ ರವರ ದನದ ಕೊಟ್ಟಿಗೆಗೆ ಕರೆದುಕೊಂಡು ಹೋಗುವುದನ್ನು ನಾನು ನೋಡಿರುತ್ತಾನೆ ಎಂದು ಹೇಳಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಕೊಟ್ಟಂತಹ 4 ಹೇಳಿಕೆಯಲ್ಲಿ ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಇದೆ ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಆರೋಪಿತನೊಂದಿಗೆ ಅನೈತಿಕ ಸಂಬಂಧ ಹೊಂದಿರುವುದಾಗಿ ಆರೋಪಿತನು ಚಾಸಾ-1 ರವರನ್ನು ಹೈದ್ರಾಬಾದಿಗೆ ಹೋಗಿ ಜೀವನ ಮಾಡೋಣ ಎಂದು ಹೇಳಿರುತ್ತಾನೆ ಎಂದು ಎಂದು ನನಗೆ ಹೇಳಿರುತ್ತಾಳೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಚಾಸಾ-1 ಇವರು ನನ್ನ ಮಗ ಚಿಕ್ಕವನು ಇರುತ್ತಾನೆ ಅವನ ಭವಿಷ್ಯದ ಸಲುವಾಗಿ ನಾನು ಇರಬೇಕಾಗುತ್ತದೆ ಎಂದು ಹೇಳಿರುತ್ತಾಳೆ ಎಂದು ಮೃತ ನರೇಂದ್ರ ನಮ್ಮ ಅನೈತಿಕ ಸಂಬಂಧಕ್ಕೆ ಅಡ್ಡಿ ಆಗುತ್ತಾನೆ ಎಂದು ತಿಳಿಸಿದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ನರೇಂದ್ರನ ಮೂಗು, ಬಾಯಿ ಗಟ್ಟಿಯಾಗಿ ಹಿಡಿದು ಉಸಿರುಗಟ್ಟಿಸಿ ಕೊಲೆ ಮಾಡಿರುತ್ತಾನೆ ಎಂದು ಗೊತ್ತಾಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 4 ಅವುಗಳನ್ನು ಮೃತ ನರೇಂದ್ರನಿಗೆ ಸಂಬಂಧ ಪಟ್ಟಿರುತ್ತವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಆ ದಿನ ಚಾಸಾ-28 ರವರ ಅಂಗಡಿಯ ಹತ್ತಿರ ಆರೋಪಿ ಮೃತ ನರೇಂದ್ರನೊಂದಿಗೆ ಇದ್ದ ಎಂದು ಚಾಸಾ-28 ರವರ ಅಂಗಡಿಯ ಸಿ.ಸಿ ಕ್ಯಾಮರದಲ್ಲಿ ಕಂಡು ಬಂದು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ ಮತ್ತು ನಾನು ಪೊಲೀಸರಿಗೆ ಕೊಟ್ಟಂತಹ 4 ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಈಗ ಚಾಸಾ-1 ಇವರು ತನ್ನ ತವರು ಮನೆಯಲ್ಲಿ ಇರುತ್ತಾಳೆ. ನಾವು ಚಾಸಾ-1 ರವರ ಮೇಲೆ ಅನೈತಿಕ ಸಂಬಂಧ ಹೊಂದಿರುತ್ತಾಳೆ ಎಂದು ಹುಟ್ಟಿಸಿ ಆಕೆಯ ಆಸ್ತಿಯನ್ನು ಕಬಳಿಸಬೇಕೆಂದು ನಾವು ಕಾಕಲವಾರ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.